US – 065

# IV Semester B.A. Examination, May 2017
## (Fresh + Repeaters) (CBCS)
## (2015-16 and Onwards)
### ಕನ್ನಡ ಐಚ್ಛಿಕ (ಪತ್ರಿಕೆ – IV)
### ನಡುಗನ್ನಡ ಕಾವ್ಯ ಸಂಗ್ರಹ, ಪಾಶ್ಚಾತ್ಯ ಕಾವ್ಯ, ಕಾವ್ಯ ಮೀಮಾಂಸೆ ಮತ್ತು ಸಾಹಿತ್ಯ ವಿಮರ್ಶೆ

Time : 3 Hours

Max. Marks : 100

I. ಕೆಳಗಿನ ಪದ್ಯದ ಭಾವಾರ್ಥ ಬರೆಯಿರಿ : (1×6=6)

ಮಾಡಲರಿಯದವಂಗೆ ಕೊಳಚೆಯ
ಮಾಡವೀತನು ತಪ್ಪದೈದಿಟ
ಮಾಡಬಲ್ಲೊಡೆಯೀ ಶರೀರವೆ ರತ್ನವಾಗಿಹುದು
ಖೋಡಿಗಳೆವುದು ಮಾಯೆ ಗೀಯೆಯ
ನೀಡಿಸುವುದಾ ಮಿತ್ತುಗಿತ್ತುದ
ರೂಢಿಯಲಿ ತನು ಸಿದ್ಧರಾವೈ ಪ್ರಭುವೆ ಕೇಳೆಂದ

II. ಎರಡು ವಿಷಯಗಳಿಗೆ ಟಿಪ್ಪಣಿ ಬರೆಯಿರಿ : (2×2=4)

ಅಭಯಮತಿ, ಮಾರಿದತ್ತ, ಗೋರಕ್ಷ, ಅಲ್ಲಮ.

III. ಎರಡು ಪ್ರಶ್ನೆಗಳಿಗೆ ಸಂಕ್ಷಿಪ್ತವಾಗಿ ಉತ್ತರಿಸಿ : (2×5=10)

1) ಅಭಯರುಚಿ ಅಭಯಮತಿ ಹಾಗೂ ಮಾರಿದತ್ತರು ಭೇಟಿಯಾದ ಸಂದರ್ಭ.

2) ಅಮೃತಮತಿ ಅಷ್ಟಾವಂಕನ ಗಾನಕ್ಕೆ ಮರುಳಾದ ಸಂದರ್ಭ.

3) ಅಲ್ಲಮ ಮತ್ತು ಸಿದ್ಧರಾಮನ ಶಿಷ್ಯರ ಮುಖಾಮುಖಿ.

4) ಅಲ್ಲಮ–ಗೋರಕ್ಷರ ವಾಗ್ವಾದ.

IV. ನಾಲ್ಕು ಪ್ರಶ್ನೆಗಳಿಗೆ ವಿವರಣಾತ್ಮಕವಾಗಿ ಉತ್ತರಿಸಿ : (4×10=40)

1) ಅಮೃತಮತಿ ಅಷ್ಟಾವಂಕನಿಗೆ ಒಲಿದ ಸಂದರ್ಭ ಮತ್ತು ಪರಿಣಾಮಗಳನ್ನು ಚಿತ್ರಿಸಿ.

2) ಅಭಯರುಚಿ ಮಾರಿದತ್ತನಿಗೆ 'ನಿರ್ಮಲ ಧರ್ಮದಿಂ ಪಾಲಿಸು ಧರೆಯಂ' ಎಂದು ಹೇಳಲು ಕಾರಣವೇನು ? ವಿವರಿಸಿ.

3) ದೂದವಿ ಅಷ್ಟಾವಂಕನನ್ನು ಹೇಗೆ ವರ್ಣಿಸಿದ್ದಾಳೆ ? ವಿವರಿಸಿ.

P.T.O.

Scanned by CamScanner

4) ಗೋರಕ್ಷನಿಗೆ ಅಲ್ಲಮ ನೀಡಿದ ಉಪದೇಶದ ಸ್ವಾರಸ್ಯ ಕುರಿತು ಬರೆಯಿರಿ.

5) ವಜ್ರದೇಹಿಯಾದವನು ಬಯಲು ದೇಹಿಯಾದದ್ದನ್ನು ಕವಿ ಹೇಗೆ ಚಿತ್ರಿಸಿದ್ದಾನೆ ? ವಿಶ್ಲೇಷಿಸಿ.

6) ಸಿದ್ಧರಾಮನ ಶಿಷ್ಯರನ್ನು ಅಲ್ಲಮನು ಎದುರಿಸಿದ ಬಗೆ ಹೇಗೆ ? ವಿವರಿಸಿ.

V. **ಎರಡು** ಪ್ರಶ್ನೆಗಳಿಗೆ ಸಂಕ್ಷಿಪ್ತವಾಗಿ ಉತ್ತರಿಸಿ : **(2×5=10)**

1) ಅನುಕರಣ ತತ್ವದ ವೈಶಿಷ್ಟ್ಯವನ್ನು ಕುರಿತು ಬರೆಯಿರಿ.

2) ಭವ್ಯತೆ ಎಂದರೇನು ? ಕಾವ್ಯದಲ್ಲಿ ಅದರ ಮಹತ್ವವೇನು ?

3) ಅಭಿವ್ಯಕ್ತಿವಾದ ಎಂದರೇನು ?

4) ಕಾವ್ಯ ಪ್ರತಿಮೆಯನ್ನು ಕುರಿತು ಬರೆಯಿರಿ.

VI. **ಮೂರು** ಪ್ರಶ್ನೆಗಳಿಗೆ ವಿವರವಾಗಿ ಉತ್ತರ ಬರೆಯಿರಿ : **(3×10=30)**

1) ಸಾಹಿತ್ಯ ವಿಮರ್ಶೆ ಎಂದರೇನು ? ವಿಮರ್ಶೆಯಿಂದಾಗುವ ಪ್ರಯೋಜನಗಳೇನು ? ವಿಶ್ಲೇಷಿಸಿ.

2) ಚಾರಿತ್ರಿಕ ವಿಮರ್ಶೆಯ ಉಗಮ–ವಿಕಾಸಗಳನ್ನು ಕುರಿತು ಚರ್ಚಿಸಿ.

3) ಮನಃಶ್ಶಾಸ್ತ್ರೀಯ ವಿಮರ್ಶೆಯ ಮಹತ್ವವನ್ನು ಪ್ರತಿಪಾದಿಸಿ.

4) ಸ್ತ್ರೀವಾದಿ ವಿಮರ್ಶೆ ಎಂದರೇನು ? ಅದರ ಲಕ್ಷಣಗಳನ್ನು ವಿವರಿಸಿ.

---

Scanned by CamScanner